**ದಿನಾಂಕಃ04-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿಯ ಪರ ಶ್ರೀ. ಎಂ. ಆರ್. ಆರ್ , ವಕೀಲರಿಂದ:-**

1. ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನಾನು ವೃತ್ತಿಯಲ್ಲಿ ರಿಯಲ್ ಎಸ್ಟೇಟ್ ಮಾಡುತ್ತೇನೆ. ನಾನು 10 ರಿಂದ 12 ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತೇನೆ. ಈ ದಾವೆಯಲ್ಲಿ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಯಾವುದೇ ನೋಟಿಸ್ ಬಂದಿರುವುದಿಲ್ಲ. ನನ್ನನ್ನು ನ್ಯಾಯಾಲಯಕ್ಕೆ ವಾದಿಯೇ ಕರೆದುಕೂಂಡು ಬಂದಿರುತ್ತಾರೆ. ನಾನು ವಾದಿಯ ಹೋಟಲ್ ನ ಪಕ್ಕ ಕೆಲಸವನ್ನು ಮಾಡುತ್ತಿದ್ದ ಕಾರಣ ನನಗೆ ವಾದಿಯು ಕಳೆದ 25 ವರ್ಷಗಳಿಂದ ಪರಿಚಯವಿದ್ದಾರೆ. ನೀವು ಮತ್ತು ವಾದಿಯು ಒಳ್ಳೆಯ ವಿಶ್ವಾಸದಿಂದ ಇರುವ ಕಾರಣದಿಂದ ಇಂದು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ತಾನು ಸೈಟಿನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಹಿಯನ್ನು ಮಾಡಿರುವ ಕಾರಣ ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುತ್ತಾರೆ.

2. ನಿಮಗೆ ಪ್ರತಿವಾದಿಯ ಪರಿಚಯ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ಮತ್ತು ಪ್ರತಿವಾದಿಯ ಮಗನ ನಡುವೆ ಈ ಹಿಂದೆ ಗಲಾಟೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನೀವು ರಿಯಲ್ ಎಸ್ಟೇಟ್ ಮಾಡುತ್ತೀರಾ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ರಾಮಯ್ಯನವರ ಮಗನಾದ ಆರ್. ರೇಣುಕಾ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

3. ದಾವಾಸ್ವತ್ತಿನ ವಿಸ್ತೀರ್ಣ ಮತ್ತು ಸರ್ವೆ ನಂಬರ್ ನ ಬಗ್ಗೆ ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿಯು ತಾನು ಅಗ್ರಿಮೆಂಟ್ ಗೆ ಸಹಿಯನ್ನು ಹಾಕುವ ಸಮಯದಲ್ಲಿ ಅದರ ಬಗ್ಗೆ ಗೊತ್ತಾಯಿತು ಎನ್ನುತ್ತಾರೆ. ನಿಪಿ-1 ಕ್ಕೆ ಸಹಿಯನ್ನು ಹಾಕಲು ವಾದಿಯು ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಾನು ಅಲ್ಲಿಗೆ ಹೋಗುವ ಮೊದಲೇ ದಾವಾಸ್ವತ್ತು ನ್ನು ರೂ. 3 ಲಕ್ಷಕ್ಕೆ ಮಾತುಕತೆ ಆಗಿರುತ್ತದೆ. ವಾದಿಯು ನನ್ನ ಸಮಕ್ಷಮದಲ್ಲಿ ಪ್ರತಿವಾದಿ ಮತ್ತು ಅವರ ಯಜಮಾನರಿಗೆ ರೂ. 2, 70, 000/- ಹಣವನ್ನು ನೀಡಿದರು. ವಾದಿಯು ರೂ. 500/- ಮುಖ ಬೆಲೆಯ ನೋಟನ್ನು ಪ್ರತಿವಾದಿ ಮತ್ತು ಅವರ ಯಜಮಾನರಿಗೆ ನೀಡಿದರು. ವಾದಿಯು 5 ಕಟ್ಟುಗಳು ಮತ್ತು ರೂ. 20 ಸಾವಿರ ಹಣವನ್ನು ನೀಡಿದರು. ನನ್ನ ಸಮಕ್ಷಮದಲ್ಲಿ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ವಾದಿಯು 2 ಕಡೆಗಳಲ್ಲಿ ತನ್ನ ಸಹಿಯನ್ನು ಮಾಡಿದರು. ನಾನು ಸಹಿ ಮಾಡಿದ ಪೇಪರ್ ಗೆ ವಾದಿಯು ಸಹಿಯನ್ನು ಮಾಡಿದರು. ವಾದಿ ಮತ್ತು ನೀವು ಒಂದೇ ಪೆನ್ ನ್ನು ಉಪಯೋಗಿಸಿದ್ದೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

4. ಹಣಕಾಸಿನ ವ್ಯವಹಾರವನ್ನು ಹೊರತುಪಡಿಸಿ ಆಗಿರುವ ಬೇರೆ ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನೀವು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವ ಕಾರಣದಿಂದ ವಾದಿಯ ಜೊತೆಯಲ್ಲಿ ಶಾಮೀಲಾಗಿ ನಿಪಿ-1 ರಂತೆ ಸುಳ್ಳು ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ನೀವು, ವಾದಿ, ಪ್ರತಿವಾದಿ ಮತ್ತು ಅವರ ಯಜಮಾನರು, ಪಿ. ಡಬ್ಲ್ಯೂ-2 ಮತ್ತು 3 ರವರು ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಸಮಕ್ಷಮದಲ್ಲಿ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿಯು ವಾದಿಗೆ ದಾವಾಸ್ವತ್ತನ್ನು

ಮಾರಾಟ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.  ನಿಮಗೆ ಪ್ರತಿವಾದಿಯ ಮಗನ ಜೊತೆಯಲ್ಲಿ ಗಲಾಟೆ ಆಗಿರುವ ಕಾರಣದಿಂದ ಪ್ರತಿವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾರರ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

**ಓ. ಹೇ. ಕೇ. ಸ. ಇ. ಎ.  ಒಪ್ಪಿರುತ್ತಾರೆ,**

**2 ನೇ  ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**